# ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ರವರ ನ್ಯಾಯಾಲಯ ಮೊಳಕಾಲ್ಮೂರು

ಓಎಸ್. ಸಂಖ್ಯೆ 40/2017

ಡಿ.ಡಬ್ಲ್ಯೂ 1

ದಿನಾಂಕ:14.06.2023 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋದಿಸಲಾಯಿತು.

**ಪಾಟೀ ಸವಾಲುಃ ವಾದಿ ಪರ ವಕೀಲರಿಂದಃ**

1 ನೇ ಪ್ರತಿವಾದಿ ನನ್ನ ತಂದೆ, ಆರೋಗ್ಯವಾಗಿರುತ್ತಾರೆ ಎಂದರೆ ಸರಿ, ಸಾಕ್ಷಿಯು ಮುಂದುವರೆದು ಬಹಳ ದೂರ ನಡೆಯಲು ಆಗುವುದಿಲ್ಲ. ನನ್ನ ಮದುವೆ 2 ನೇ ಪ್ರತಿವಾದಿಯ ಜೊತೆಗೆ ಕೂಡ್ಲಿಗೇರೆಹಟ್ಟಿಯಲ್ಲಿ ಆಗಿರುತ್ತದೆ ಎಂದರೆ ಸರಿ. ನಾನು ಹುಟ್ಟಿದಾಗಿನಿಂದ ಮದುವೆ ಆಗುವವರೆಗೂ ಕೂಡ್ಲಿಗೇರಹಟ್ಟಿಯಲ್ಲಿ ವಾಸವಿದ್ದೆನು ಎಂದರೆ ಸಾಕ್ಷಿಯು ನೇರ್ಲಹಳ್ಳಿಯಲ್ಲಿ ವಾಸವಿದ್ದೆ ಎಂದು ನುಡಿದಿರುತ್ತಾರೆ. ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನನಗೆ 4 ಜನ ಮಕ್ಕಳು, ಅವರುಗಳು ಕೂಡ್ಲಿಗೇರಹಟ್ಟಿಯಲ್ಲಿ ಜನಿಸಿರುತ್ತಾರೆ ಎಂದು ಸಾಕ್ಷಿಯು ನೇರ್ಲಹಳ್ಳಿಯಲ್ಲಿ ಜನಿಸಿರುತ್ತಾರೆ ಎಂದು ನುಡಿದಿರುತ್ತಾರೆ. ವಾದಿಯು ನೇರ್ಲಹಳ್ಳಿಯಲ್ಲಿ ವಾಸವಿರುತ್ತಾರೆ ಎಂದರೆ ಸರಿ. ವಾದಿಯು ನೇರ್ಲಹಳ್ಳಿಯಲ್ಲಿ ರಾಜಣ್ಣ ನವರ ಮನೆಯಲ್ಲಿ ಬಾಡಿಗೆ ಮನೆಯಲ್ಲಿ ವಾಸವಿರುತ್ತಾರೆ ಎಂದರೆ ಗೊತ್ತಿಲ್ಲ, ಆದರೆ ಅವರ ಮನೆಯಲ್ಲಿ ವಾಸವಿರುತ್ತಾರೆ. ವಾದಿಗೆ

ನೇರ್ಲಹಳ್ಳಿಯಲ್ಲಿ 2014 ರ ಹಿಂದೆ ಖಾಲಿ ನಿವೇಶನ ಇರಲಿಲ್ಲ ಎಂದರೆ ಸರಿ. ವಾದಿಯು ತನಗೆ ನಿವೇಶನ ಇಲ್ಲ ಎಂದು ಹೇಳಿ ಗ್ರಾಮ ಪಂಚಾಯಿತಿ ಅಧ್ಯಕ್ಷನಿಗೆ ಮತ್ತು ಪಿ.ಡಿ.ಓ. ಗೆ ದಿನಾಂಕಃ 18.1.2013 ಹಾಗೂ 4.9.2013 ರಂದು ಅರ್ಜಿ ಸಲ್ಲಿಸಿರುತ್ತಾರೆ ಎಂದರೆ ಸರಿಯಲ್ಲ.ಆದ ಕಾರಣ ದಿಃ 12.9.2014 ರಂದು ವಿಶೇಷ ಸಭೆ ಕರೆದು ವಾದಿಗೆ ಪೂರ್ವ - ಪಶ್ಚಿಮ 15 ಅಡಿ, ಉತ್ತರ - ದಕ್ಷಿಣ 25 ಅಡಿ, ನಿವೇಶನವನ್ನು ಮಂಜೂರು ಮಾಡಿರುತ್ತಾರೆ ಎಂದರೆ ಸರಿಯಲ್ಲ. ಈಶ್ವರಿಯವರ ನಿವೇಶನದ ಚಕ್ಕುಬಂಧಿ ಪೂರ್ವಕ್ಕೆ ಮೊಳಕಾಲ್ಮೂರು ನಿಂದ ಕೊಂಡ್ಲಹಳ್ಳಿ ಗೆ ಹೋಗುವ ರಸ್ತೆ, ಪಶ್ಚಿಮಕ್ಕೆ ಜಗಳೂರಯ್ಯನ ಮನೆ ಇದೆ ಎಂದರೆ ಸಾಕ್ಷಿಯು ಜಗಳೂರಯ್ಯ ಮತ್ತು ಸಣ್ಣ ಪಾಪಮ್ಮ ಆದ ನನ್ನ ಮನೆ ಇರುತ್ತದೆ ಎಂದು ನುಡಿದಿರುತ್ತಾರೆ. ನನ್ನ ಮನೆ ಇರುತ್ತದೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸಾಕ್ಷಿಯು ನನ್ನ ತಂದೆಯ ಮನೆ ಇದ್ದು, ನನ್ನ ನಿವೇಶನ ಇರುತ್ತದೆ ಎಂದು ನುಡಿದಿರುತ್ತಾರೆ. ನನ್ನ ನಿವೇಶನದ ಖಾತೆ ನಂಬರ್ ಮತ್ತು ಅದರ ವಿಸ್ತೀರ್ಣ ಮತ್ತು ಚಕ್ಕುಬಂಧಿ ಹೇಳಲು ಆಗುವುದಿಲ್ಲ ಎಂದರೆ ಸಾಕ್ಷಿಯು ನನಗೆ ಓದಲು ಬಾರದ ಕಾರಣ ಹೇಳಲು ಆಗುವುದಿಲ್ಲ ಎಂದು ನುಡಿದಿರುತ್ತಾರೆ. ಉತ್ತರಕ್ಕೆ ಸಿಮೆಂಟ್ ರಸ್ತೆ ಇದೆ ಎಂದರೆ ಸರಿ. ದಕ್ಷಿಣಕ್ಕೆ ಪೂಜಾರಿ ಪಾಲಮ್ಮ ಗಂಡ ಪೂಜಾರ ಬೊಮ್ಮಯ್ಯ ರವರ ಮನೆ ಇರುತ್ತದೆ ಎಂದರೆ ಸಾಕ್ಷಿಯು ಅವರ ಮನೆ ದೂರ ಇರುತ್ತದೆ ಎಂದು ನುಡಿದಿರುತ್ತಾರೆ. ಪೂಜಾರಿ ಪಾಲಮ್ಮ ಗಂಡ ಪೂಜಾರ

ಬೊಮ್ಮಯ್ಯರವರು  ಮನೆ ಕಟ್ಟಿಸಿಕೊಂಡಿರುತ್ತಾರೆ ಎಂದರೆ ಸರಿ. ಸದರಿ ಮನೆಯನ್ನು ನ್ಯಾಯಬೆಲೆ ಅಂಗಡಿಗೆ ಬಾಡಿಗೆ ಕೊಟ್ಟಿರುತ್ತಾರೆ ಎಂದರೆ ಸರಿ. ನನಗೆ ನಿವೇಶನವನ್ನು ಯಾವಾಗ ಮತ್ತು ಯಾರು ಕೊಟ್ಟಿರುತ್ತಾರೆ ಎಂದು ಹೇಳಲು ಬರುವುದಿಲ್ಲ. ನೇರ್ಲಹಳ್ಳಿ ಪಂಚಾಯಿತಿಯವರು ನನಗೆ ನಿವೇಶನವನ್ನು ನೀಡಿರುತ್ತಾರೆ. ಅದರ ದಾಖಲಾತಿಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ನನ್ನ ಹೆಸರಿಗೆ ಯಾವುದೇ ದಾಖಲಾತಿಗಳು ಇರುವುದಿಲ್ಲ ಮತ್ತು ಪಂಚಾಯಿತಿಯವರು ನಿವೇಶನವನ್ನು ನೀಡಿರುವುದಿಲ್ಲ ಎಂದರೆ ಸರಿಯಲ್ಲ. ವಾದಿಗೆ ನಿವೇಶನ ನೀಡಿರುತ್ತಾರೆ ಮತ್ತು ಅವರಿಗೆ ಮನೆ ಕಟ್ಟಿಸಿಕೊಳ್ಳುವ ಶಕ್ತಿ ಇರಲಿಲ್ಲ ಎಂದರೆ ಸರಿಯಲ್ಲ. ವಾದಿಗೆ ಡಾಃ ಬಿ.ಆರ್. ಅಂಬೇಡ್ಕರ್ ಯೋಜನೆಯಡಿ ಮನೆ ಮಂಜೂರು ಮಾಡಿರುತ್ತಾರೆ ಎಂದರೆ ಸರಿಯಲ್ಲ. ದಾವಾ ಆಸ್ತಿಯಲ್ಲಿ ಮನೆ ಕಟ್ಟಿಕೊಳ್ಳಲು ಆದೇಶ ಪತ್ರ ಸಹ ನೀಡಿರುತ್ತಾರೆ ಎಂದರೆ ಸರಿಯಲ್ಲ. ಆದೇಶ ಪತ್ರ ಪಡೆದ ನಂತರ ವಾದಿಯು ತನ್ನ ಆಸ್ತಿಯನ್ನು ಸ್ವಚ್ಚ ಮಾಡಲು ಮತ್ತು ಬುನಾದಿ ತೆಗೆಯಲು ಬಂದಿರುತ್ತಾರೆ ಎಂದರೆ ಸರಿಯಲ್ಲ. ನಾವು ಅದಕ್ಕೆ ಅಡ್ಡಿ ಪಡಿಸಿರುತ್ತೇವೆ ಎಂದರೆ ಸರಿಯಲ್ಲ. ವಾದಿ ಮತ್ತು ಅವರ ಗಂಡ ತಾವು ಮನೆ ಕಟ್ಟಿಸಿಕೊಳ್ಳಲು ಸ್ವಚ್ಚ ಮಾಡುತ್ತಿದ್ದೇವೆ ಎಂದು ಹೇಳಿದರೆ ನಾವು ಅವರ ಮಾತು ಕೇಳಲು ತೊಂದರೆ ಮಾಡಿರುತ್ತೇವೆ ಎಂದರೆ ಸರಿಯಲ್ಲ. ಗ್ರಾಮಸ್ಥರು ನಮಗೆ ಬುದ್ದಿವಾದ ಹೇಳಿರುತ್ತಾರೆ ಎಂದರೆ ಸರಿಯಲ್ಲ. ಎಲ್ಲಾ ದಾಖಲಾತಿಗಳು ವಾದಿಯ ಹೆಸರಿಗೆ

ಇದ್ದರೂ ಸಹ ನಾವು ತೊಂದರೆ ಕೊಟ್ಟಿರುತ್ತೇವೆ ಎಂದರೆ ಸರಿ. ದಾವಾ ಆಸ್ತಿಗೆ ಕಂದಾಯ ವಾದಿ ಕಟ್ಟುತ್ತಿದ್ದಾರೆ ಎಂದರೆ ಸರಿಯಲ್ಲ. ನನ್ನ ತಂದೆಯು ಮತ್ತು ನಾನು ಗುಂಪುಗಾರಿಕೆ ಮತ್ತು ರಾಜಕೀಯವಾಗಿ ಪ್ರಭಲವಿರುತ್ತೇವೆ ಎಂದರೆ ಸರಿಯಲ್ಲ. ಆದ ಕಾರಣ ವಾದಿಯು ಈ ದಾವಾ ತಂದಿರುತ್ತಾರೆ ಎಂದರೆ ಸರಿಯಲ್ಲ. ಏಕಪಕ್ಷೀಯ ಆದೇಶ ಆದ ಮೇಲೆ ಸಹ, ನಮಗೆ ನೊಟೀಸ್ ಬಂದ ನಂತರ ನಾವು ಅದನ್ನು ಉಲ್ಲಂಘನೆ ಮಾಡಿರುತ್ತೇವೆ ಎಂದರೆ ಸರಿಯಲ್ಲ. ಪ್ರತಿವಾದ ಪತ್ರವನ್ನು ನಾನೇ ಹೇಳಿ ಬರೆಸಿರುತ್ತೇನೆ. ವಾದಿಯ ಆಸ್ತಿಯನ್ನು ಅಕ್ರಮ ಲಾಭ ಪಡೆಯಲು ಸುಳ್ಳು ಪ್ರತಿವಾದ ಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾವು 70 ವರ್ಷಗಳಿಂದ ನೇರ್ಲಹಳ್ಳಿಯಲ್ಲಿ ವಾಸವಿರುತ್ತವೆ ಎಂದು ನುಡಿದಿರುತ್ತೇನೆ ಎಂದರೆ ಸರಿಯಲ್ಲ. ನನಗೆ ಮನೆ ನಂ.83/236 ಪಂಚಾಯಿತಿಯವರು 40 x 25 ಅಡಿ ವಿಸ್ತೀರ್ಣ ನೀಡಿರುವುದಿಲ್ಲ ಎಂದರೆ ಸರಿಯಲ್ಲ. ಸದರಿ ಮನೆಯ ಖಾತೆ ಜಯಲಕ್ಷ್ಮಿ ಗಂಡ ಬೋರಯ್ಯ ರವರಿಗೆ ನೀಡಿರುತ್ತಾರೆ ಎಂದರೆ ಸರಿಯಲ್ಲ. ದಾವಾ ಆಸ್ತಿಯು ಖಾತೆ ನಂ. 264 ಆಸ್ತಿ ನಂ. 264 ವಾದಿಯ ಆಸ್ತಿಯಾಗಿರುತ್ತದೆ ಎಂದರೆ ಸರಿಯಲ್ಲ. ದಾವಾ ಸ್ವತ್ತಿನ ಮೇಲೆ ಈವರೆಗೂ ವಾದಿಯೇ ಸ್ವಾಧೀನದಲ್ಲಿರುತ್ತಾರೆ ಎಂದರೆ ಸರಿಯಲ್ಲ. ವಾದಿಗೆ ಮಂಜೂರು ಆದ ಜಾಗದಲ್ಲಿ ನಮಗೆ ಅಡ್ಡಿ ಆತಂಕ ಮಾಡುವ ಅಧಿಕಾರ ಇಲ್ಲ ಎಂದರೆ ಸರಿಯಲ್ಲ. ನಾವು ತೆಂಗಿನಮರ ಮತ್ತು ಹೂವಿನಗಿಡಗಳನ್ನು ಹಾಕಿರುವುದಿಲ್ಲ

ಎಂದರೆ ಸರಿಯಲ್ಲ. ವಾದಿಯವರ ಆಸ್ತಿಯನ್ನು ಲಪಾಟಯಿಸಲು ಸುಳ್ಳು ದಾಖಲೆಗಳನ್ನು ಸೃಷ್ಟಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನ ಎಂದರೆ ಸರಿಯಲ್ಲ. ನಿಡಿ-18 ಕೂಡ್ಲಿಗೇರಹಟ್ಟಿ ದಾಖಲೆ ಎಂದರೆ ಸರಿಯಲ್ಲ. ಕೂಡ್ಲಿಗೇರಹಟ್ಟಿಗೂ ಮತ್ತು ನೇರ್ಲಹಳ್ಳಿಗೂ ಅರ್ಧ ಕಿ.ಮೀ. ದೂರವಿರುತ್ತದೆ ಎಂದರೆ ಸರಿ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

**ಓ.ಹೇ.ಕೇ.ಸರಿ ಇದೆ**

ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ
ಮೊಳಕಾಲ್ಮೂರು